ಅ. ಸರ್ಕಾರದ ವಿವಿಧ ಇಲಾಖೆಯ ಹಾಗೂ ಸರ್ಕಾರಿ ಸಾಮ್ಯದಲ್ಲಿ ಬರುವ ನಿಗಮ ಮಂಡಳಿಗಳ ರೂ. 5.00 ಲಕ್ಷದವರೆಗಿನ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ನೀಡುವ ಪ್ರಸ್ತಾಪನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ಬಗ್ಗೆ ಹಣಕಾಸು ಇಲಾಖೆಯು ಹೊರಡಿಸಿರುವ ಆದೇಶವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಆದೇಶದಲ್ಲಿ ಸ್ಪಷ್ಟ ಮಾಹಿತಿ ಇಲ್ಲದಿರುವುದರಿಂದ ಇತರೆ ಇಲಾಖೆಗಳಲ್ಲಿ ತುಂಡು ಗುತ್ತಿಗೆಯ ಆಧಾರದ ಮೇಲೆ ಕಾಮಗಾರಿಯನ್ನು ಆಧಾರದ ಮೇಲೆ ಕಾಮಗಾರಿಯನ್ನು ನೀಡಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಬಂದಿದಲ್ಲಿ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. ಬಂದಿದೆ

ಆ. ಬಂದಿದೆ.

ಇ. ಸರ್ಕಾರದ ಆದೇಶ ಸಂ. ಲೋಇ 129 ಆಕೋ 3ಃ2002 ದಿನಾಂಕ 21.6.2002 ರಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಲ್ಲಿ ಮಾತ್ರ ಆದೇಶದಲ್ಲಿ ಕಾಣಿಸಿರುವ ಕಾಮಗಾರಿಗಳಿಗೆ ತುಂಡು ಗುತ್ತಿಗೆ ನೀಡಲು ಅಧಿಕಾರದ ಪ್ರತ್ಯಾಯೋಜನೆ ಇರುತ್ತದೆ. ಆದಾಗ್ಯೂ ಬೇರೆ ಇಲಾಖೆಗಳೂ ಸಹ ಈ ಆದೇಶದಲ್ಲಿ ಕಾಣಿಸಿರುವ ಕಾಮಗಾರಿಗಳಿಗೆ ..... ಸಂಬಂಧಿಸಿದಂತೆ ಅದರಲ್ಲಿರುವ..... ಆದೇಶವನ್ನು ಪಾಲಿಸಬಹುದಾಗಿದೆ.

ರಾಜ್ಯದಲ್ಲಿ ಹೊಸದಾಗಿ ಸಿಎಲ್-2 ಹಾಗೂ ಸಿಎಲ್-9 ಮದ್ಯದ ಅಂಗಡಿಗಳ ಮಂಜೂರು

111(253) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ರಾಜ್ಯದಲ್ಲಿ ಹೊಸದಾಗಿ ಸಿಎಲ್-2 ಹಾಗೂ ಸಿಎಲ್-9 ಮದ್ಯದಂಗಡಿಗಳನ್ನು ಮಂಜೂರು ಮಾಡುವ ಪ್ರಸ್ತಾಪನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ. ಹಾಗಿದ್ದಲ್ಲಿ, ಹೊಸದಾಗಿ ಮದ್ಯದಂಗಡಿಗಳನ್ನು ಪ್ರಾರಂಭಿಸಲು ಯಾವ ಆಧಾರದ ಮೇಲೆ ಪರವಾನಿಗೆಯನ್ನು ನೀಡಲಾಗುವುದು?

ಇ. ಸದರಿ ಪ್ರಸ್ತಾಪನೆಯು ಯಾವ ಹಂತದಲ್ಲಿದೆ?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ. ರಾಜ್ಯದ ಪ್ರತಿ ತಾಲ್ಲೂಕಿನ ಜನಸಂಖ್ಯೆ ಮತ್ತು ಸಂಭನೀಯ ಬೇಡಿಕೆ ಆಧಾರದ ಮೇಲೆ ಇರಬೇಕಾದ ಮದ್ಯದಂಗಡಿಗಳ ಸಂಖ್ಯೆ (ಕೋಟಾ) ಅನ್ನು ನಿಗದಿಪಡಿಸುವ ಪ್ರಸ್ತಾಪನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ. ಕರ್ನಾಟಕ ಅಬಕಾರಿ (ಭಾರತೀಯ ತಯಾರಿಕಾ ಮದ್ಯ ಮಾರಾಟ) ನಿಯಮಗಳು 1968ರ ನಿಯಮ 4ಎ ಮತ್ತು 5 ರ ಪ್ರಕಾರ.

ಇ. ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ

ಗೌರಿಬಿದನೂರು ತಾಲ್ಲೂಕಿನ ಸಿಎಲ್-2 ಮತ್ತು ಸಿಎಲ್-9 ಸನ್ನದುದಾರ ವಿವರ

ಕ್ರ.ಸಂ.	ಸಿಎಲ್-2	ಕ್ರ.ಸಂ.	ಸಿಎಲ್-9
1.	ಆರ್.ರಾಮಕೃಷ್ಣಪ್ಪ, ರಘು ವೈನ್ಸ್ ವಾಟದಹೊಸಳ್ಳಿ, ನಂ. 53/82 ಎ, ಗೌರಿಬಿದನೂರು ತಾಲ್ಲೂಕು	1.	ಎಂ.ನವೀನ್ ಕುಮಾರ್, ಮಂಚೇನಹಳ್ಳಿ ಬಾರ್, ನಂ.643, ಮಂಚೇನಹಳ್ಳಿ, ಗೌರಿಬಿದನೂರ ತಾಲ್ಲೂಕು
2.	ಎನ್. ರಾಮಲಕ್ಷ್ಮಮ್ಮ, ಶಿವಶಕ್ತಿ ವೈನ್ಸ್ ವಾಟದ ಹೊಸಳ್ಳಿ ನಂ.376, ಗೌರಿಬಿದನೂರು ತಾಲ್ಲೂಕು.	2.	ಎನ್.ಎಂ.ಚೆನ್ನಪ್ಪರೆಡ್ಡಿ, ಶ್ರೀದೇವಿ ಬಾರ್ ವಿದುರಾಸ್ವತ ನಂ.505 ಗೌರಿಬಿದನೂರ ತಾಲ್ಲೂಕು.
3.	ಎಂ. ನವೀನ್ ಕುಮಾರ್, ಮಾರುತಿ ಲಿಕ್ಕರ್ಸ್ ನಂ. 649, ನಗರಗೆರೆ, ಗೌರಿಬಿದನೂರು ತಾಲ್ಲೂಕು	3.	ಪಿ.ಎನ್.ಪೆದ್ದರೆಡ್ಡಿ, ಕಾಮ ದೇನು ಬಾರ್ ನಂ 841/653/ 18 ಹಿರೇಬದನೂರು ಗೌರಿ ಬಿದನೂರು ತಾಲ್ಲೂಕು
4.	ಎಂ.ನವೀನ್ ಕುಮಾರ್ ತೊಂಡೇಬಾಡಿ ವೈನ್ಸ್, ನಂ. 486/1 ತೊಂಡೇಬಾವಿ ಗೌರಿಬಿದನೂರು ತಾಲ್ಲೂಕು	4.	ಪಿ.ಎನ್.ಪೆದ್ದರೆಡ್ಡಿ ಮಂಜುನಾಥ ಬಾರ್, ನಂ.892, ಮಂಚೇನಹಳ್ಳಿ ಗೌರಿಬಿದನೂರು ತಾಲ್ಲೂಕು
5.	ಆರ್. ಎಲ್. ದೇವೆಂದ್ರ ಸ್ವಾಮಿ ನಾಗಪೂಜಾ ವೈನ್ಸ್ ನಂ.11 ಡಿ.ಪಾಳ್ಯ, ಗೌರಿಬಿದನೂರು ತಾಲ್ಲೂಕು	5.	ಎಂ. ನವೀನ್ ಕುಮಾರ್, ಕದಂಬ ಬಾರ್, ನಂ.1216, ಗೌರಿಬಿದನೂರು ತಾಲ್ಲೂಕು
6.	ಪಿ,ಎನ್.ಪೆದ್ದಾರೆಡ್ಡಿ, ಮಂಜುನಾಥ ವೈನ್ಸ್ ನಂ.1212, ಮಂಚೇನಹಳ್ಳಿ ಗೌರಿಬಿದನೂರು ತಾಲ್ಲೂಕು	6.	ಎಂ.ನವೀನ್ ಕುಮಾರ್ ಮರಿಗಮ್ಮ ಬಾರ್, ನಂ. 662/1,613/1, ಗೌರಿಬಿದನೂರು ಟೌನ್
7.	ಶ್ರೀಮತಿ ಉಮಾದೇವಿ ವಿಷ್ಣು ವೈನ್ಸ್ ನಂ.135, ತೊಂಡೇ ಬಾವಿ, ಗೌರಿಬಿದನೂರು ತಾಲ್ಲೂಕು	7.	ಮೇಃಮಹೇಶ್ವರಿ ಬಾರ್, ನಂ, 486, ಗೌರಿಬಿದನೂರು ಟೌನ್
8.	ಶ್ರೀ ಮತಿ ಟಿ.ವಿ.ಭಾಗ್ಯಮ್ಮ ಶಕ್ತಿ ವೈನ್ಸ್ ನಂ. 622, ಡಿ. ಪಾಳ್ಯ, ಗೌರಿಬಿದನೂರು ತಾಲ್ಲೂಕು	8.	ಮೇಃ ವೆಲ್‌ಕಂ ಬಾರ್, ನಂ. 193/1108, ಗೌರಿಬಿದನೂರು ಟೌನ್
9.	ಮಂಜುಳಾ ಬಾಯಿ,ಭವಾನಿ ವೈನ್ಸ್ ನಂ. 136, ಕೋಟಾಲದಿನ್ನೆ,	9	ಶ್ರೀಮತಿ ಸುನಂದಮ್ಮ ಉಮಾ ಮಹೇಶ್ವರಿ ಬಾರ್,

ಕ್ರ.ಸಂ.	ಸಿಎಲ್-2	ಕ್ರ.ಸಂ.	ಸಿಎಲ್-9
	ಗೌರಿಬಿದನೂರು ತಾಲ್ಲೂಕು.		ನಂ. 95/97, ಮಂಚೇನಹಳ್ಳಿ ಗೌರಿಬಿದನೂರು ತಾಲ್ಲೂಕು
10.	ಶ್ರೀ ರಾಮಾಂಜೇಯ. ದೀಪಕ್ ವೈನ್ಸ್ ನಂ. 169/ಎ, ಗೌರಿಬಿದನೂರು	10	ಎನ್. ಗಂಗರೆಡ್ಡಿ, ಲಕ್ಷ್ಮಿ ಬಾರ್, ನಂ.26 ಗೌರಿಬಿದನೂರು ಟೌನ್
11.	ಡಿ.ಎಂ.ಲಕ್ಷ್ಮಣರಾವ್, ಮಂಜುನಾಥ್ ವೈನ್ಸ್ ನಂ.847/733. ಗೌರಿಬಿದನೂರು ಟೌನ್	11	ಡಿ.ಎನ್.ವೆಂಕಟರೆಡ್ಡಿ, ಶಿವಾಬಾರ್,ನಂ.838/2744 ಗೌರಿಬಿದನೂರು.
12.	ವೈ.ಎನ್.ಸುಬ್ಬರೆಡ್ಡಿ, ಲಕ್ಷ್ಮಿ ವೈನ್ಸ್ ನಂ. 879, ಗೌರಿಬಿದನೂರು ಟೌನ್	12	ಜಿ.ಎನ್.ನಾಗರಾಜ್, ಮಾರುತಿ ಬಾರ್,ನಂ19/923 ಗೌರಿಬಿದನೂರು,
13.	ವೈ.ಎನ್.ಅನಸೂಯಮ್ಮ, ಮಹಾಲಕ್ಷ್ಮಿ ವೈನ್ಸ್ ನಂ. 3059/11 ಗೌರಿಬಿದನೂರು ಟೌನ್.	13.	ಟಿ.ವಿ.ಭಾಗ್ಯಮ್ಮ ಮಣಿಕಂಠ ಬಾರ್ ನಂ,76, ಗೌರಿಬಿದ -ನೂರು ಟೌನ್
14.	ಡಿ.ಎಲ್.ಮಠಮರೆಡ್ಡಿ, ರಾಘವೇಂದ್ರ ವೈನ್ಸ್,ನಂ. 984, ಗೌರಿಬಿದನೂರು ಟೌನ್	14.	ಡಿ.ಎಲ್.ಮಠಮರೆಡ್ಡಿ ಮಂಜುನಾಥ ಬಾರ್,ನಂ. 13/1 ಗೌರಿಬಿದನೂರು ಟೌನ್
		15.	ಎನ್. ನಾರಾಯಣಮ್ಮ ಬಾಲಾಜಿ ಬಾರ್, ನಂ, 94/27/8, ಮಂಚೇನಹಳ್ಳಿ ಗೌರಿಬಿದನೂರು
		16.	ಎಂ. ನವೀನ್‌ಕುಮಾರ್, ಮಾರುತಿ ಬಾರ್,ಮಂಚೇನ ಹಳ್ಳಿ, ಗೌರಿಬಿದನೂರು ತಾಲ್ಲೂಕು.

ಮೆಸ್ಕಾಂ ಕಂಪನಿಗೆ ಗ್ಯಾರಂಟಿ

112(232)ಶ್ರೀ ಆಪ್ಪಚ್ಚುರಂಜನ್ ಎಂ.ಪಿ.(ಸೋಮವಾರಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಮೆಸ್ಕಾಂ ಕಂಪನಿಗೆ ಸರ್ಕಾರ ಎಷ್ಟು ಕೋಟಿ ರೂ.ಗಳ ಗ್ಯಾರಂಟಿ ನೀಡಬೇಕಾಗಿದೆ.

ಆ. ಗ್ಯಾರಂಟಿ ಹಣ ಯಾವಾಗ ನೀಡಲಾಗುತ್ತದೆ?

ಇ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಶನಿವಾರಸಂತೆ 66 ಕೆ.ವಿ. ವಿದ್ಯುತ್ ಕಾರ್ಯಾಗಾರದ ಕಾಮಗಾರಿಯು ಸ್ಥಗಿತಗೊಳ್ಳಲು ಕಾರಣವೇನು ಯಾವಾಗ ಪ್ರಾರಂಭಿಸಲಾಗುವುದು?